ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಪ್ರಾಯಿಸ್ ಆದ್ದು [ನಂ. 12.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 24, ಸ|| 1904.

IIನೆ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗ್ಗೆ ಕೇರಿಂದ ಕೊಡೋಪಾದ ಇಸ್ತಿಹಾರ್‌ನಾಮೆಗಳು.

ವಿದ್ಯಾಭ್ಯಾಸದ ಇಲಾಖಾ.

ನೋಟಿಫಿಕೇಷ್ನ—ನಂಬರು 51.

ತಾರೀಖು 14ನೆ ಮಾಹೆ ಮಾರ್ಚಿ ಸ|| 1904ನೆ ಇಸವಿ.

ಮೈಸೂರು ವಸ್ಲಿಯನ್ ಮಿಷನ್ ಹೈಸ್ಕೂಲ್ Vನೆ ಫಾರಂನಲ್ಲಿ ಓದುತ್ತಿದ್ದ ಕೆ. ವಿ. ಸೀತಾರಾಮೈಯ್ಯನು 1903ನೆ ಇಸವಿ ಮಾರ್ಚ್ ತಿಂಗಳಲ್ಲಿ ಸ್ಕೂಲನ್ನು ಬಿಟ್ಟು ಅನಂತರ ಅವನು ಒಂದು ಸುಳ್ಳು ಆವ್ಪಣೆ ಚೀಟಿಯನ್ನು ಹಾಜರ್‌ಮಾಡಿ ಪುನಹಾ ಅದೇ ಸ್ಕೂಲ್ VIನೆ ಫಾರಂಗೆ ದಾಖಲಾಗಲು ಪ್ರಯತ್ನಪಟ್ಟದ್ದಕ್ಕಾಗಿ ಅವನು 1905ನೆ ಇಸವಿ ಜನವರಿ ಮಾಹೆ ವರಗೆ ಮೈಸೂರು ಸೀಮೆಯಲ್ಲಿರುವ ಗಾರನ್ಮೆಂಟ್, ವಿಡಡ ಮತ್ತು ಸಾಹ್ಕಾರದಿಂದ ಅಂಗೀಕರಿಸಲ್ಪಟ್ಟ ಯಾವ ಹೈಸ್ಕೂಲ್ Vನೆ ಫಾರಂಗೆ ಸೇರಕೂಡದೆಂದು ವಿಧಿಸಿರುತ್ತೆ.

ಹರ್. ಜೆ. ಭಾಭಾ,
ಇನ್‌ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷ್ನ.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷ್ನ.

ತಾರೀಖು 16ನೆ ಮಾರ್ಚಿ 1904.

ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನೆಂದರೆ,—ಈ ಕೆಳಗೆ ಕಂಡ ಜನಗಳು ಅವರವರ ಹೆಸರಿನ ಬಾಜೂದಲ್ಲಿ ಕಂಡ ಸ್ಥಳಗಳಲ್ಲಿ ಜಾಬೀನ್ತೆ ಮತ್ತು ಬಿದರು ವಗ್ಗೆರ ಬಗೆ ಲೈಸೆನ್ಸುಗಳು ಕೊಡುವ ಬಗ್ಗೆ ಲೈಸೆನ್ಸುಗಳು ಛಕ್ಕು ಮಾಡುವ ಬಗ್ಗೆ ಲೈಸೆನ್ಸು ವಂಡಡಾಗಿ ನೇಮಕ ಮಾಡಲ್ಪಟ್ಟರುತ್ತಾರೆ:—

ತಾಲ್ಲೂಕಾ ಹೆಸರು.	ಸ್ಥಳದ ಹೆಸರು.	ಲೈಸೆನ್ಸುದಾರರ ಹೆಸರು.
ಗುಂಡ್ಲುಪೇಟೆ ...	ಹುರಿಯೂರು	ಲಕ್ಷ್ಮಿನಾರಣಪ್ಪನವರು
ಹೆಗ್ಗಡದೇವನಕೋಟೆ	ಮಲಿಯೂರು ...	ದಾಸಗೌಡ
ಚಾಮರಾಜನಗರ ...	ಮೂಕಹಳ್ಳಿ ...	ಗುರುಪಾದದೇವರು
ಹುಣಸೂರು ...	ವೀರನಹೊಸಹಳ್ಳಿ ...	ನಂಜುಂಡೈಯ್ಯ
ಡಿಟೋ ...	ಕೊಪ್ಪ ...	ಶಿವರಾಮೈಯ್ಯ

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮಿಷ್ನರ್, ಮೈಸೂರು.